ಓಎಸ್ 88/2021 ಪಿ ಡಬ್ಲ್ಯೂ .1 ಮಂಜುನಾಥ ಪಿ.ಬಿ.

ದಿನಾಂಕ 14.11.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ** ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಎಂ.ಎಸ್.ಎಂ. ವಕೀಲರಿಂದಃ

ದಾವಾ ಐಟಂ ನಂಬರ್ 9ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ 1ರಿಂದ 3ರವರು ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 254/2021 ಎಂದು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಅಪರ ಸಿವಿಲ್ ನ್ಯಾಯಾಲಯ ಕಿರಿಯ ವಿಭಾಗ ಶ್ರೀರಂಗಪಟ್ಟಣದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ತಾತ್ಕಾಲ್ಕಿ ನಿರ್ಬಂಧಕಾಜ್ಞೆ ಆದೇಶವಾಗಿದೆ ಎಂದರೆ ಸರಿ . ಸದರಿ ಈ ದಾವೆಯನ್ನು ನಡೆಸುತ್ತಿರುವ ವಕೀಲರು ಹಾಗೂ ನನ್ನ ಪರವಾಗಿ ಓ.ಎಸ್.ನಂ.254/2021 ದಾವೆಯಲ್ಲಿ ಹಾಜರಾಗಿರುವ ವಕೀಲರು ಒಬ್ಬರೇ ಇರುತ್ತಾರೆ. ನಾನು ಸದರಿ ದಾವೆಯಲ್ಲಿ ಲಿಖಿತ ತಕರಾರನ್ನು ಸಲ್ಲಿಸಿರುತ್ತೇನೆ. ದಿನಾಂಕ 07.01.2021 ರಂದು ನನ್ನ ತಂದೆ ದಾವಾ ಐಟಂ ನಂ.9ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ 1 ರಿಂದ 3ರವರ ಹೆಸರಿಗೆ ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ದಾನಪತ್ರದಂತೆ ಪ್ರತಿವಾದಿ 1ರಿಂದ 3ರವರು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡು ಸದರಿ ಐಟಂ ನಂ.9ರಲ್ಲಿ ಚೌಟ್ರಿಯನ್ನು ನಡೆಸುತ್ತಿದ್ದಾರೆ, ಆ ವಿಚಾರ ನನಗೆ ಗೊತ್ತು ಎಂದರೆ ಸುಳ್ಳು. ನನಗೆ ದಾನಪತ್ರವನ್ನು ಬರೆದುಕೊಟ್ಟಿರುವುದು ಗೊತ್ತಿದ್ದರೂ, ಸದರಿ ವಿಚಾರವನ್ನು ನಾನು ಓ.ಎಸ್.ನಂ.254/2021 ದಾವೆಯಲ್ಲಿ ಸಲ್ಲಿಸಿರುವ ಲಿಖಿತ ತಕರಾರಿನಲ್ಲಿ ತಿಳಿಸಿದ್ದರೂ ಸಹ ಈಗ ಗೊತ್ತಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ನನಗೆ ವಿಲ್ ಮುಖಾಂತರ ಕೊಟ್ಟಿರುವ ಆಸ್ತಿಗಳಲ್ಲಿಯೇ ಸ್ವಾಧೀನಾನುಭವದಲ್ಲಿದ್ದು ಮುಂದುವರೆಸಿಕೊಂಡು ಹೋಗುತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿ 2ಗೆ ಬರೆದುಕೊಟ್ಟಿರುವ ವಿಲ್ ಪ್ರಕಾರ ಸರ್ವೆ ನಂ.102 ರಲ್ಲಿ 0.36 ಗುಂಟೆ, ದಾವಾ ಐಟಂ ನಂ.7ರಲ್ಲಿರುವ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ತಂದೆಯ ಕಾಲದಿಂದಲೂ ಅದೇ ಮನೆಯಲ್ಲಿ ವಾಸವಾರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ಆಸ್ತಿಯನ್ನು ವಿಲ್ ಮುಖಾಂತರ 4ನೇ ಪ್ರತಿವಾದಿಗೆ ನೀಡಿದ್ದು, ಅವರೇ ಸದರಿ ಆಸ್ತಿಯನ್ನು ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ ನಂ.6ನ್ನು ನನ್ನ ಇನ್ನೊಬ್ಬ ತಂಗಿಯಾದ ಪ್ರತಿವಾದಿ 5ರವರಿಗೆ ನೀಡಿದ್ದು ಅವರೇ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸುಳ್ಳು. ನಾನು ಮದುವೆಯಾದ ದಿನದಿಂದಲೂ ಬೋರಯ್ಯನವರ ಮನೆಯಿಂದ ಪ್ರತ್ಯೇಕವಾಗಿ ವಾಸವಾಗಿರುವುದರಿಂದ ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪಾದನೆ ಮಾಡಿ ನನ್ನ ತಂದೆಗೆ ಹಣ ನೀಡಿದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಹಾಗಾಗಿ ತಂದೆಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಯುವವರೆಗೆ ಕುಟುಂಬದ ಖರ್ಚು ವೆಚ್ಚ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಎಲ್ಲಾ ನಿರ್ವಹಣೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸುಳ್ಳು.

**ಪ್ರತಿವಾದಿ 4 ಮತ್ತು 5ರವರು ಲಿಖಿತ ತಕರಾರು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ:** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ

ನಿ.ಡಿ 18 ಹಕ್ಕು ಖಾಲಾಸೆ ಪತ್ರವನ್ನು ಬರೆಯುತ ಕಾಲಕ್ಕೆ ನಾನು ಮರೀಗೌಡರವರ ವಂಶವೃಕ್ಷವನ್ನು ಕೇಳಿರುವುದಿಲ್ಲ. ನಾನು ಅವರಿಗೆ ಎಷ್ಟು ಜನ ಮಕ್ಕಳು ಮತ್ತು ಯಾರ ಯಾರು ಇರತ್ತಾರೆಂದು ಕೇಳಿಲ್ಲ. ಮರೀಗೌಡ ಹೆಣ್ಣು ಮಕ್ಕಳ ಮತ್ತು ಗಂಡು ಮಗನ ಸಹಿ ಪಡೆದುಕೊಂಡಿಲ್ಲ. ಭಾಗ್ಯವತಿರವರು ನಿ.ಡಿ.18 ರ ಪ್ಯಾರಾ 3 ರಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತಾರೆ. ನಿ.ಡಿ 18 ರಲ್ಲಿರುವ ಎಲ್ಲಾ ಸಂಗತಿಗಳನ್ನು ಭಾಗ್ಯವತಿಯವರು ಹೇಳಿ ಬರೆಸಿರುತ್ತಾರೆ, ಮರೀಗೌಡರವರು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಮರೀಗೌಡರವರಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಓದಿ ಹೇಳಿರುತ್ತೇನೆಂದು ನುಡಿಯುತ್ತಾರೆ. ನಾನು ಓದಿ ಹೇಳಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು, ಭಾಗ್ಯವತಿ ಹಾಗೂ ಸಾಕ್ಷಿದಾರರು ಸೇರಿಕೊಂಡು ನಿ.ಡಿ 18 ನ್ನು ಸೃಷ್ಟಿಸಿಕೊಂಡಿದ್ದೇವೆಂದರೆ ಸರಿಯಲ್ಲ. ಮರೀಗೌಡರವರು ಸ್ವ-ಇಚ್ಛೆಯಿಂದ ನಿ.ಡಿ 18 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಡಿ.18 ರಲ್ಲಿ ಸ್ವತ್ತು ಹೊರತುಪಡಿಸಿ ಮರೀಗೌಡರವರ ಒಟ್ಟು ಕುಟುಂಬಕ್ಕೆ ಬೇರೆ ಯಾವ ಆಸ್ತಿ ಇದ್ದವು ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನಿ.ಡಿ.18 ಕ್ಕೆ ಸಹಿ ಮಾಡಿರುವ ಲೋಕೇಶ್ ಮತ್ತು ಮೋಹನ್‌ಬಾಬುರವರು ಪಾಲಹಳ್ಳಿ ಗ್ರಾಮದವರಲ್ಲ. ಸಾಕ್ಷಿದಾರರು ಬಿ.ಡಿ.ವಿಶ್ವೇಶ್ವರಯ್ಯರವರ ಮಕ್ಕಳಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಇಬ್ಬರೂ ಅಣ್ಣ ತಮ್ಮಂದಿರು ಇರುತ್ತಾರೆ, ಆದರೂ ಸಹ ನಾನು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ಪಾಲಹಳ್ಳಿ ಗ್ರಾಮದವರನ್ನು ಸಾಕ್ಷಿದಾರರಾಗಿ ಸಹಿ ಮಾಡಿಸಿರುತ್ತೇನೆಂದರೆ ಸರಿಯಲ್ಲ. ಮರೀಗೌಡರವರು ಭಾಗ್ಯವತಿಯವರಿಗೆ ತನ್ನ ಸೇವೆ ಮಾಡುತ್ತಿರುವುದರಿಂದ ನಿ.ಡಿ.18 ನ್ನು ಬರೆದುಕೊಡುವುದಾಗಿ ನನ್ನ ಬಳಿ ಹೇಳಿದ್ದರು. ಆ ರೀತಿ ಮರೀಗೌಡರವರು ಹೇಳಿ ಬರೆಸಿಲ್ಲ, ಭಾಗ್ಯವತಿಯವರು ಹೇಳಿ ಬರೆಸಿರುತ್ತಾರೆಂದರೆ ಸರಿಯಲ್ಲ. ನಿ.ಡಿ 18 ನ್ನು ಬರೆಯುವಾಗ ಮರೀಗೌಡರವರೇ ಬಂದಿದ್ದರು, ಅವರನ್ನು ಯಾರು ಕರೆದುಕೊಂಡು ಬಂದಿಲ್ಲ. ಭಾಗ್ಯವತಿ ಮರೀಗೌಡರವರ ಸೊಸೆ ಎಂದು ನನ್ನ ಬಳಿ ಹೇಳಿರುತ್ತಾರೆ. ಮರೀಗೌಡರವರು ಭಾಗ್ಯವತಿರವರಿಗೆ ನಿ.ಡಿ 18 ರಲ್ಲಿ ಆಸ್ತಿಯನ್ನು ಬರೆದು ಕೊಡುವ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.18 ನ್ನು ಬರೆದಾಗ ಮರೀಗೌಡರವರಿಗೆ 75 ವರ್ಷ ವಯಸ್ಸಾಗಿದ್ದು, ಅವರು ಸ್ವ -ಇಚ್ಛೆಯಿಂದ ಬರೆದುಕೊಡಲು ಸಾಧ್ಯವಾಗಲಿಲ್ಲ, ನಾವೇ ಸೃಷ್ಟಿಸಿಕೊಂಡೇವು ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ